

ನೋಡಿದ್ದೆಲ್ಲ ಚಿತ್ರ ಬಿಡಿಸಬೇಕು. ಹೂಗಳ ಚಿತ್ತಾರದೊಂದಿಗೆ ಸೈಕಲ್ಲು, ಕಾರು, ಬೈಕುಗಳು ಅವನ ಪುಸ್ತಕದ ತುಂಬ ಅರಳಿರುತ್ತಿದ್ದವು. ಥೇಟ್ ಅವನ ನಗುಮೊಗದಂತೆಯೇ.

ಅಮ್ಯೂಸ್‌ಮೆಂಟ್ ಪಾರ್ಕಿಗೆ ಬರಬೇಕೆಂಬ ಆಸೆ ಪುನೀತನದೇ. 'ನೀ ಪರೀಕ್ಷಾದಾಗ ಭೋಲೊ ಮಾರ್ಕ್ಸ ತೊಗೊಂಡ್ರ ಕರಕೊಂಡು ಹೋಗ್ತೇನಿ' ಎಂದಿದ್ದ ಅವರಪ್ಪ ಸಂತೋಷ. ಅದರಂತೆ ಪುನೀತ ತರಗತಿಗೆ ಎರಡನೇಯವನಾಗಿ ಪಾಸಾಗಿದ್ದ. ಈಗ ಅವನನ್ನು ಹಿಡಿದವರಿಲ್ಲ. ಹೇಳಿದಂತೆ ಎಲ್ಲರನ್ನೂ ಹೊರಡಿಸಿದ್ದ ಸಂತೋಷ. ಅನಂತನ ಹೆಂಡತಿ ಮಕ್ಕಳೊಂದಿಗೆ ರಜಕ್ಕೆ ತವರಿಗೆ ಹೋಗಿದ್ದಳು. 'ನಾವು ಗಪ್ಪ ಮನ್ಯಾಗ ಇರ್ತೇವಪಾ. ಅಲ್ಲೆ ನಮಗೇನೂ ಆಡಲಿಕ್ಕೆ ಆಗೂದುಲ್ಲಾ. ಸುಮ್ಮನ ರೊಕ್ಕ ದಂಡ' ಎಂದಿದ್ದೆ. 'ಹೆಂಗಿರ್ತದ ನೋಡೀಯಂತ ನಡಿ ಅವ್ವಾ. ಅಪ್ಪ ನಮಗಿಂತ ಮದಲ ತಯಾರಾಗ್ಯಾರ' ಎಂದ ಅನಂತ.

ಸರಿ ಎನ್ನುತ್ತ ಹೊರಟು ಬಂದಿದ್ದೆ. ಆದರೆ ಅವರಾಡುವುದನ್ನು ನೋಡಿಯೇ ತಲೆ ಸುತ್ತುತ್ತಿತ್ತು. ಚಿಕ್ಕವಳಿದ್ದಾಗ ಜಾತ್ರೆಯಲ್ಲಿರುತ್ತಿತ್ತಲ್ಲ ಇನ್ನೂ ದೊಡ್ಡದಾದ ಜಾಯಿಂಟ್ ವ್ಹೀಲ್. ಆಸೆಪಟ್ಟು ಅದರಲ್ಲಿ ಕೂರುವುದೇ. ಮತ್ತೆ ತಲೆ ಸುತ್ತುವುದು... ವಾಂತಿ ಇದ್ದದ್ದೇ. 'ಬ್ಯಾಡಂದ್ರ ಕೇಳೂದುಲ್ಲ' ಎಂದು ಅಮ್ಮನ ಬಳಿ ಬೈಸಿಕೊಂಡದ್ದೆಷ್ಟು ಬಾರಿಯೋ.

ಅಮ್ಮನ ನೆನಪಿನೊಂದಿಗೆ ಬಾಲ್ಯವೆಲ್ಲ ಗರಿಬಿಚ್ಚಿಕೊಂಡಿತು. ತವರು ಕೈ ಬೀಸಿ ಕರೆದಂತಾಯಿತು. ಗೋಕಾಕದ ಬಳಿ ಕಲ್ಲೋಳಿ ಎಂಬ ಹಳ್ಳಿ ನನ್ನೂರು. ಹಸಿರನುಟ್ಟ ಊರಿನಲ್ಲಿ ಅಪ್ಪ ಹಸಿರು ಬೆಳೆಯುವ ರೈತ. ನಾವು ಮೂವರು ಮಕ್ಕಳು. ದೊಡ್ಡವಳು ಅಕ್ಕ, ಮಧ್ಯೆ ನಾನು, ಕೊನೆಗೆ ವಂಶೋದ್ಧಾರಕ ತಮ್ಮ. ಅಪ್ಪನ ಅಕ್ಕ ಅಂದರೆ ನನ್ನ ಸೋದರತ್ತೆಯ ಮನೆ ಘಟಪ್ರಭಾದಲ್ಲಿತ್ತು. ಕುಟುಂಬಗಳ ಮಧ್ಯೆ ಒಳ್ಳೆಯ ಸಂಬಂಧವೂ ಇತ್ತೆನ್ನಿ. ಅವಳ ಪತಿ ತೀರಿ ಹೋಗಿ ಎಷ್ಟೋ ಕಾಲವಾಗಿತ್ತು. ತವರಿನವರು ಕರೆದರೂ ಬರದ ಸ್ವಾಭಿಮಾನಿ ಅತ್ಯಾ ಊರವರ ಆಸರೆಯಿಂದ ಅಲ್ಲೇ ಬದುಕು ಕಟ್ಟಿಕೊಂಡಿದ್ದಳು. ಇದ್ದ ಹೊಲವನ್ನು ನೋಡಿಕೊಂಡು ಬೆಳೆ ಬೆಳೆದಿದ್ದಳು. ಮಗಳ ಮದುವೆ ಮಾಡಿದ್ದಳು. ಅಪ್ಪ ಕೂಡ ಆಗಾಗ ಹೋಗಿ ಬರುತ್ತಿದ್ದ.

ಅವಳ ಎರಡನೇ ಮಗ ವೆಂಕಟೇಶ, ಕನಸುಗಣ್ಣಿನವ ಹತ್ತನೇ ಇಯತ್ತೆ ಚೆನ್ನಾಗಿ ಪಾಸಾಗಿದ್ದ. ಆಗಾಗ ದಂಡ, ಸಾಮು ಹಾಕುತ್ತ ಕುಸ್ತಿ ಕೂಡ ಆಡುತ್ತಿದ್ದ. ಗೋಕಾಕದಲ್ಲಿ ಕಾಲೇಜಿಗೆ ಹೋಗುತ್ತಿರುವಾಗಲೇ ಅಂಚೆ ಇಲಾಖೆಯಲ್ಲಿ ಉದ್ಯೋಗ ದೊರೆತಿತ್ತು. ಅತ್ಯಾಳಿಗೆ ಕೋಡು ಮೂಡಿದ್ದವೆಂದು ಬೇರೆ ಹೇಳಬೇಕಿಲ್ಲ. ಸೈಕಲ್ ಮೇಲೇರಿ ಟ್ರಿನ್ ಟ್ರಿನ್‌ಗುಟ್ಟಿಸುತ ಕರದಂಟು ತಂದು ಅಮ್ಮನ ಕೈಲಿಟ್ಟು ನಮಸ್ಕಾರ ಮಾಡಿ 'ನಿಮ್ಮ ಆಶೀರ್ವಾದ ಇರಲಿ ಮಾಮಿ' ಎಂದವ ನನ್ನತ್ತ ಓರೆನೋಟ ಬೀರಿದ್ದ. ಅಮ್ಮನಿಗಂತೂ ಅವನ ಮೇಲೆ ಅಪರಿಮಿತ ಅಭಿಮಾನ. ಅಪ್ಪನಿಗೆ ಮೆಚ್ಚಿನ ಅಳಿಯ. ನನಗೆ...

ಅವನಿಗೆ ಚಿಗುರು ಮೀಸೆ ಮೂಡಿದಾಗ ನಾನಿನ್ನೂ ಲಂಗದ ಹುಡುಗಿ. ಆಗಾಗ ಕುಡಿನೋಟವೆಸೆಯುತ್ತ ಕರದಂಟು ತರುತ್ತಿದ್ದ ಹುಡುಗ ನನ್ನಲ್ಲಿ ಕನಸುಗಳನ್ನರಳಿಸಿದ್ದು ಸುಳ್ಳಲ್ಲ. 'ಕುಸುಮಾ, ನಮ್ಮ ತ್ವಾಟದ್ದು ಚಿಕ್ಕು ಹಣ್ಣು. ತಿಂದು ನೋಡು' ಎಂದು ಹಣ್ಣು ತಂದು ತಿನಿಸುತ್ತಿದ್ದವನನ್ನು ಮನದಲ್ಲೇ ಆರಾಧಿಸುತ್ತಿದ್ದೆ. ಅವ್ವ, ಅಪ್ಪ ಕೂಡ 'ಕುಸುಮಾಂದೇನ ತ್ರಾಸಿಲ್ಲ. ವೆಂಕಟೇಶಗ ಕೇಳಿದ್ರಾತು' ಎಂದು ಮಾತನಾಡುವುದನ್ನು ಕೇಳಿಸಿಕೊಂಡಾಗ ಕೆನ್ನೆಗಳು ಕೆಂಪೇರಿದ್ದವು. ಎಲ್ಲರೂ ಸೇರಿ ಗೊಡಚಿನವಲ್ಲಿ ಫಾಲ್ಸಿಗೆ ಹೋಗಿ ತೊಯ್ದು ತೊಪ್ಪೆಯಾಗಿದ್ದೆವು. ಬಿಟ್ಟೂಬಿಡದೇ ನನ್ನನ್ನೇ ನೋಡುತ್ತಿದ್ದವನಿಂದ ತಪ್ಪಿಸಿಕೊಂಡು ಓಡಿ ಬಂದಿದ್ದೆ. ಹಾಗೆಯೇ